ಸಹಿ 'ನಂದ್' ಎಂದಿದೆ. ಉಳಿದವರ ಸಹಿಗಳೂ ಅಷ್ಟೇ, ಸಂಕ್ಷಿಪ್ತ. ದಂಡಿ ಸತ್ಯಾಗ್ರಹದ ನಂದಲಾಲರ ವಿಖ್ಯಾತ ಗಾಂಧಿ ರೇಖಾಚಿತ್ರದ ಜೊತೆಗೆ, ಅಂಚಿನ ಅಲಂಕಾರವನ್ನು ಬನಿ ಪಟೇಲ್ ನಿರ್ವಹಿಸಿದ್ದಾರೆ.

ಸ್ವದೇಶಿ ಚಳವಳಿಯು ಪ್ರಖರಗೊಂಡು ದೃಶ್ಯ ಕಲಾಕ್ಷೇತ್ರವನ್ನೂ ಆವರಿಸಿದ ಸಂದರ್ಭದಲ್ಲೇ, ಬಂಗಾಳದಲ್ಲಿ ನಂದಲಾಲ್ ಬೋಸ್, ಆನಂದ ಕುಮಾರಸ್ವಾಮಿಯವರ ಪ್ರಸ್ತುತಿಯಲ್ಲಿ ವಸಾಹತುಶಾಹಿಯನ್ನು ಧಿಕ್ಕರಿಸಿದ 'ಭಾರತೀಯ ಕಲೆಯ ಪುನರುಜ್ಜೀವನ' ಪರ್ವವು ಆರಂಭಗೊಂಡಿತು. ಶಾಂತಿನಿಕೇತನದ ಕಲಾಕಲಿಕೆ ಮತ್ತು ಚಿತ್ರಿಸುವಿಕೆಯಲ್ಲಿ ಪಶ್ಚಿಮ ಮತ್ತು ಯುರೋಪ್ ದೇಶಗಳ, ಮುಖ್ಯವಾಗಿ ವಿಕ್ಟೋರಿಯನ್ ಧೋರಣೆಯನ್ನು ಧಿಕ್ಕರಿಸಲಾಯಿತು. ಬಂಗಾಳದಲ್ಲಿ ಕಲಾವಿದರು ಹಲವು ಟೀಕೆಗಳ ನಡುವೆಯೂ ತಮ್ಮದೇ ಆದ, ಮುಖ್ಯವಾಗಿ ಪೂರ್ವ ರಾಷ್ಟ್ರಗಳ 'ಕಲಾ ಪರಂಪರೆಯ ಪರಸ್ಪರ'ವನ್ನು ಸಾಧಿಸಲು ಪ್ರಯತ್ನಿಸಿದರು. ಈ ಚಳವಳಿಯ ಆತ್ಮವೇ 'ಗಾಂಧಿ' ಮತ್ತು 'ಗಾಂಧಿತಾತ್ವಿಕತೆ'.

ಸ್ವಾತಂತ್ರ್ಯ ಚಳವಳಿಯ ಕಾಲಕ್ಕೇ ಗಾಂಧಿಯವರ ಸಂಪರ್ಕ ಆರ್.ಎಸ್. ನಾಯ್ಡು ಅವರಿಗೆ ಇದ್ದಿತು. ಯರವಾಡ ಜೈಲಿನಲ್ಲಿ ಇಬ್ಬರೂ ಒಟ್ಟಿಗೇ ಇದ್ದರು. ವೆರಿಯರ್ ಎಲ್ವಿನ್ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ನಮ್ಮವರೇ ಆಗಿದ್ದರು. ಆ ಸಂದರ್ಭದ ಹಲವು ರೇಖಾಚಿತ್ರಗಳು ನಾಯ್ಡು ಅವರಿಂದ ಮೂಡಿಬಂದಿವೆ.

## 5

ಸ್ವಾತಂತ್ರ್ಯಾನಂತರದ ವಸಾಹತೋತ್ತರ ದೃಶ್ಯಕಲಾ ಸಂದರ್ಭವು ಹೊಸ ಆಶಯ–ನೋಟಗಳನ್ನು ಅರಗಿಸಿಕೊಂಡು ಅಭಿವ್ಯಕ್ತಿಸಿದರೂ, ಗಾಂಧಿಯವರ ಅಪೂರ್ವ ವ್ಯಕ್ತಿತ್ವವೂ ಬಹುತೇಕರನ್ನು ಕಾಡಿದಂತೆ, ಅವರುಗಳ ಅಭಿವ್ಯಕ್ತಿಗಳಲ್ಲಿಯೂ ಗಾಂಧಿಯವರು ಕಾಣಿಸಿಕೊಂಡಿದ್ದಾರೆ.

ಗಾಂಧಿಯವರು ಹತ್ಯೆಯಾದ ದೆಹಲಿಯ ಬಿರ್ಲಾ ಭವನದ, ಪ್ರಾರ್ಥನೆಯ ಆವರಣದ ಬದಿಯ ಮಂಟಪವೊಂದರಲ್ಲಿ, ಕೃಪಾಲ್ ಸಿಂಗ್ ಶೆಖಾವತ್ ಮತ್ತು ರಾಯಚೂರಿನ ಶಂಕರಗೌಡ



ಕೆ.ಎಂ. ಆದಿಮೂಲಂ ರೇಖಿಸಿರುವ ಗಾಂಧಿ ಚಿತ್ರ

ಬೆಟ್ಟದೂರು ಅವರು, 1955–58ರ ನಡುವೆ ಗಾಂಧಿಯವರ ಇಡೀ ಬದುಕನ್ನು ಚಿತ್ರಿಸಿದ್ದಾರೆ. ಇಂದಿಗೂ ಸಂರಕ್ಷಣೆಗೊಂಡಿರುವ ಭಿತ್ತಿಚಿತ್ರಗಳಲ್ಲಿ, ನಮಗೆ ಎಲ್ಲವೂ ಆದ ಗಾಂಧಿಯವರನ್ನು ಗ್ರಹಿಸಿರುವಿಕೆಯಲ್ಲಿ ಗಾಢವಾದ ಐತಿಹಾಸಿಕ ಪ್ರಜ್ಞೆ ಇದೆ. 'ಎಲ್ಲ ನಿಜವಾದ ಕಲೆಯು ಸರಳ ಮತ್ತು ಸಹಜವಾಗಿರುತ್ತದೆ' ಎಂಬ ಗಾಂಧಿಯವರ ಮಾತು ಇಲ್ಲಿ ನೆನಪಾಗುತ್ತದೆ. ಹಾಗಾಗಿಯೇ ಈ ಭಿತ್ತಿಚಿತ್ರಗಳು ಗಾಂಧಿಯವರ ಬದುಕಿನ ತೆರೆದ ಪುಟಗಳಂತಿವೆ. ಅವರ ಜೀವನಚರಿತ್ರೆಯ 'ಇಂಗ್ಲೀಷ್ ಜೆಂಟಲ್ ಮ್ಯಾನ್' ಅಧ್ಯಾಯ ಒಂದರಲ್ಲಿ ಸೂಟುಬೂಟು ಧರಿಸಿ, ಪಿಟೀಲು ಬಾರಿಸುತ್ತ ಇತರರೊಂದಿಗೆ ನರ್ತಿಸುತ್ತಿರುವ ದೃಶ್ಯದ ವಿವರ ಇದೆ. ಅದನ್ನು ಸಹಜವಾಗಿಯೇ ಇಲ್ಲಿ ಚಿತ್ರಿಸಲಾಗಿದೆ. ಆದರೆ, ನಮ್ಮ ಮರ್ಯಾದೆ ರಾಮಣ್ಣರಿಗೆ ಅದನ್ನು ಸಹಿಸಿಕೊಳ್ಳಲು ಸಾಧ್ಯವೇ? ಕಿಡಿಗೇಡಿಗಳು ಆ ದೃಶ್ಯವನ್ನು ಒರೆಸಲು ಪ್ರಯತ್ನಿಸಿ ಸ್ವಲ್ಪಮಟ್ಟಿಗೆ ಸಫಲರಾಗಿದ್ದಾರೆ.

ಸಾಬರಮತಿ ಆಶ್ರಮದಲ್ಲಿ 1960ರಲ್ಲಿ ಚಂದೂಲಾಲ್ ಶಾ ಮತ್ತು ಹೀರಾಲಾಲ್